# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: Providing and construction of low level causeway / Box type Bridge to Veeravaishnavi river including approach roads at Downstream of Dummasandra Ane near Vaderahalli village in Nagamangala Taluk ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

** ** **

*ಓದಲಾಗಿದೆ :-*

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು, ಇವರ ಪತ್ರ ಸಂಖ್ಯೆ:ಕಾನೀನಿನಿ/ತಾಂತ್ರಿಕ-2/ಎಡಿಯೂರು/53/2018-19/2615, ದಿನಾಂಕ:14-11-2018.

*ಪ್ರಸ್ತಾವನೆ :-*

ಮೇಲೆ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ಇವರು ವಿಷಯದ ಬಗ್ಗೆ ಪ್ರಸ್ತಾವನೆ ಸಲ್ಲಿಸುತ್ತಾ, ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕಿನ ವ್ಯಾಪ್ತಿಯಲ್ಲಿ ವೀರವೈಷ್ಣವಿ ನದಿಯು ಹರಿಯುತ್ತಿದ್ದು, ಸದರಿ ನದಿಗೆ ವಡೇರಹಳ್ಳಿ ಗ್ರಾಮದ ಹತ್ತಿರ ಸೇತುವೆ ಇಲ್ಲದಿರುವುದರಿಂದ ಮಳೆಗಾಲದಲ್ಲಿ ಪ್ರವಾಹ ಹೆಚ್ಚಾಗಿ ಆಜುಬಾಜು ಗ್ರಾಮಗಳಾದ ವಡೇರಹಳ್ಳಿ, ಕಾರಗೆರೆ, ಚಿಕ್ಕಜಟಕಾ, ದೊಡ್ಡಜಟಕಾ, ಹಾಲಾಳು, ತೂರೆಮಾವಿನಕೆರೆ, ಕುಪ್ಪ, ವಳಗೆರೆಮರ ಇನ್ನೂ ಹಲವು ಗ್ರಾಮಗಳ ಜನರಿಗೆ ಅನಾನುಕೂಲವುಂಟಾಗಿರುತ್ತದೆ ಹಾಗೂ ತಾಲ್ಲೂಕು ಕೇಂದ್ರವಾದ ನಾಗಮಂಗಲ ಹಾಗೂ ಹೋಬಳಿ ಕೇಂದ್ರವಾದ ಬೆಳ್ಳೂರಿಗೆ ಓಡಾಡಲು ತೊಂದರೆಯಾಗುತ್ತಿದ್ದು, ಸದರಿ ನದಿಗೆ ದುಮ್ಮಸಂದ್ರ ಅಣೆಕಟ್ಟಿನ ಕೆಳಭಾಗದಲ್ಲಿ ಸೇತುವೆ ನಿರ್ಮಿಸುವುದರಿಂದ ಸುಮಾರು 40 ಗ್ರಾಮಗಳ ಪ್ರಮುಖ ಸ್ಥಳಗಳಿಗೆ ಸಂಪರ್ಕ ಏರ್ಪಟ್ಟು ರೈತರಿಗೆ ಬೆಳೆಗಳನ್ನು ಮಾರುಕಟ್ಟೆಗೆ ಸಾಗಿಸಲು ತುಂಬಾ ಅನುಕೂಲವಾಗುತ್ತದೆ ಎಂದು ವರದಿ ಮಾಡಿರುತ್ತಾರೆ.

2. ಅದರಂತೆ ಸದರಿ ಕಾಮಗಾರಿಯ ಅಂದಾಜು ಪಟ್ಟಿಯನ್ನು ವಿಸ್ತೃತವಾಗಿ ವಿನ್ಯಾಸಗೊಳಿಸಿ ದಿನಾಂಕ:10-01-2018 ರಂದು ಮುಖ್ಯ ಇಂಜಿನಿಯರ್, ಹೇಮಾವತಿ ನಾಲಾ ವಲಯ, ರವರ ಅಧ್ಯಕ್ಷತೆಯಲ್ಲಿ ಜರುಗಿದ 20 ನೇ ಅಂದಾಜು ಪರಿಶೀಲನಾ ಸಮಿತಿ ಸಭೆಯಲ್ಲಿ ಮಂಡಿಸಿದ್ದು, ಸಮಿತಿಯು ಯೋಜನಾ ವರದಿಗೆ ತೆರವು ನೀಡಿರುತ್ತದೆ ಮತ್ತು ಸದರಿ ವಿಷಯವನ್ನು ದಿನಾಂಕ:14-09-2018 ರಂದು ನಡೆದ ಕಾವೇರಿ ನೀರಾವರಿ ನಿಗಮದ 65ನೇ ಮಂಡಳಿಯ ಸಭೆಯಲ್ಲಿ ಮಂಡಿಸಲಾಗಿದ್ದು, ಮಂಡಳಿಯು ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ.

3. ಈ ಹಿನ್ನೆಲೆಯಲ್ಲಿ, ರೂ.421.50 ಲಕ್ಷಗಳ ಮೊತ್ತದ Providing and construction of low level causeway / Box type Bridge to Veeravaishnavi river including approach roads at Downstream of Dummasandra Ane near Vaderahalli village in Nagamangala Taluk ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಇವರು ಕೋರಿರುತ್ತಾರೆ.

.....2..,

4. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಜಸಂಇ 27 ಎನ್‌ಹೆಚ್‌ಪಿ 2018,**
**ಬೆಂಗಳೂರು, ದಿನಾಂಕ: 30-01-2019**

Providing and construction of low level causeway / Box type Bridge to Veeravaishnavi river including approach roads at Downstream of Dummasandra Ane near Vaderahalli village in Nagamangala Taluk ಕಾಮಗಾರಿಯ ರೂ.421.50 ಲಕ್ಷ (ರೂಪಾಯಿ ನಾಲ್ಕು ಕೋಟಿ ಇಪ್ಪತ್ತೊಂದು ಲಕ್ಷದ ಐವತ್ತು ಸಾವಿರ ಮಾತ್ರ) ಗಳ ಮೊತ್ತದ ಯೋಜನಾ ಅಂದಾಜಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:FD 04 TFP 2018, ದಿನಾಂಕ:08-01-2019, ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
30/01/19

(ಬಿ.ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-2)
ಜಲ ಸಂಪನ್ಮೂಲ ಇಲಾಖೆ.

ಇವರಿಗೆ :-

1. ಪ್ರಧಾನ ಮಹಾಲೇಖಪಾಲರು, (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನ), ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಹೇಮಾವತಿ ನಾಲಾ ವಲಯ, ತುಮಕೂರು.
4. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.